ಎನ್ನುವುದು ಸುಖದಲ್ಲಿ ಕಾಲಯಾಪನೆ ಮಾಡುವ ಸತ್ಸಂಗವಲ್ಲ ಎಂಬ ಬಂಡಾಯ ಮನೋಧರ್ಮ 'ಜನ' ಸಾಹಿತ್ಯ ಸಮಾವೇಶಗಳ ಅಂತಃಸತ್ವವೇ ಆಗಿದೆ. ಸಂಭ್ರಮ, ಸಿರಿಗಳು ಶುದ್ಧ ಸಾಹಿತ್ಯ ಎಂಬ ಅಪಕಲ್ಪಿತವನ್ನು ಮುಂದಿಟ್ಟುಕೊಂಡು ಸುಡುಸತ್ಯಗಳಿಗೆ ಎದುರಾಗದೇ ಬಹಿರಂಗದ ಸೌಂದರ್ಯದಲ್ಲಿ ವಿಜೃಂಭಿಸುತ್ತವೆ. ಈ ಎರಡು ಘರ್ಷಣೆಗಳಲ್ಲಿ ಸಾಹಿತ್ಯ ಸಮ್ಮೇಳನಗಳು ಕಾಲದಿಂದ ಕಾಲಕ್ಕೆ ಹೆಚ್ಚು ಘನತೆಯಿಂದ ಮುನ್ನಡೆಯುತ್ತಿರುವುದು ಸಂತಸದ ವಿಚಾರವಾಗಿದೆ. ಇವುಗಳಲ್ಲಿ ಬಹಿರಂಗದ ಆಡಂಬರ, ಅಸ್ತವ್ಯಸ್ತತೆಗಳಾಚೆ ಜನಬದುಕಿಗೆ ತೀವ್ರವಾಗಿ ಸ್ಪಂದಿಸುವ ವಿಚಾರ ಮಂಥನಗಳು ಕನ್ನಡದ ಘನತೆಯನ್ನು ಹೆಚ್ಚಿಸಿವೆ.

ನಮ್ಮ ಈ ಕಾಲದಲ್ಲಿ ಬದುಕೇ ಬಳಕೆಯ ಪದಾರ್ಥವಾಗುತ್ತಿದೆ. ಜನರಲ್ಲಿ ವಿಸ್ಮೃತಿಯನ್ನು, ಮೆಟೀರಿಯಲಿಸ್ಟಿಕ್ ಭ್ರಮೆಯನ್ನು ತುಂಬಲಾಗುತ್ತಿದೆ. ಇದಕ್ಕೆ ಬಹುತೇಕ ದೃಶ್ಯಮಾಧ್ಯಮಗಳು, ಸಾಮಾಜಿಕ ಜಾಲತಾಣಗಳ ಕೊಡುಗೆಯೂ ಇದೆ. ಪರಿಣಾಮವಾಗಿ, ಬಹುದೊಡ್ಡ ಸಂಖ್ಯೆಯ ಯುವ ಸಮುದಾಯ ನಿಸ್ಸತ್ವಗೊಂಡಿದೆ. ಕೀಲುಗೊಂಬೆಯಾಗಿದೆ. ಅವರಲ್ಲಿರುವ ಜಿಗುಟು ತ್ರಾಣವನ್ನು ಮರುಬೆಳಸಾಗಿಸಲು ಈ ಮೂರೂ ಬಗೆಯ ಸಾಹಿತ್ಯಿಕ ವಿದ್ಯಮಾನಗಳು ಸಹಾಯಕವಾಗಬಲ್ಲುದೇನೋ. ಪರಿಣತಿಗೆ ವ್ಯಕ್ತಿಗತ ಸಾಧನೆ ಮುಖ್ಯವಾದರೂ, ಮೂಲತಃ ಆಸಕ್ತಿಯನ್ನು ಹುಟ್ಟಿಸಲು ಇದೊಂದು ಪ್ರೇರಕ. ಸದ್ಯದ ಕನ್ನಡ ಸಾಹಿತ್ಯ ತಾತ್ವಿಕ ಸಂಘರ್ಷದ ತೀವ್ರತೆಯಲ್ಲಿರುವುದರಿಂದ, ಎರಡೂ ತಾತ್ವಿಕತೆಗಳು ತಮ್ಮನ್ನು ತಾವು ಸಜ್ಜುಗೊಳಿಸಿಕೊಳ್ಳಲು ಶ್ರಮಿಸುತ್ತಿವೆ. ಜಗತ್ತಿನ ಚಿಂತನಾಧಾರೆಗಳು, ಕ್ಲಾಸಿಕ್ಸ್‌ಗಳು, ಬೌದ್ಧಿಕ ವಾಗ್ವಾದಗಳು ಕನ್ನಡಕ್ಕೆ ಬರುತ್ತಿವೆ. ಪೂರ್ವ ಪರಂಪರೆಯನ್ನು ಚಿಕಿತ್ಸಕವಾಗಿ ಮರುಪ್ರವೇಶಿಸುವುದು ಸಾಧ್ಯವಾಗಿದೆ. ಸಾಹಿತ್ಯದ ತಿಳಿವಿನ ಕ್ರಮ ಹಿಗ್ಗಿದೆ. ಸಾಹಿತ್ಯವು ಸಮಾಜೋ ಆರ್ಥಿಕ ಮತ್ತು ರಾಜಕೀಯವನ್ನು ಅರ್ಥೈಸಿಕೊಳ್ಳಬಲ್ಲ ಚಿಂತನಾಕ್ರಮ ಎಂಬುದು ಸಾಬೀತಾಗಿದೆ. ಯುವಸಮುದಾಯ ಬಹು ದೊಡ್ಡ ಪ್ರಮಾಣದಲ್ಲಿ ಸಾಹಿತ್ಯಾಧ್ಯಯನದಲ್ಲಿ ಪಾಲು ಪಡೆಯುತ್ತಿದೆ. ಆದರೆ ಬಂಡವಾಳವಾದ ಸೃಷ್ಟಿಸಿದ ಉದ್ಯೋಗಾವಕಾಶ ಮತ್ತು ನಾಗರಿಕ ಬಾಳಿನ ಮಿಥ್ಯೆಗಳು ಕನ್ನಡದ ಅಧ್ಯಯನದ ಬಳಕೆಯ ಅವಕಾಶವನ್ನು ಕಡಿಮೆ ಮಾಡುತ್ತಿವೆ. ಆಕ್ರಮಣದ ಹತ್ಯಾರಗಳು ಮುಕ್ತ ಮಾರುಕಟ್ಟೆ ನೀತಿಯೊಂದಿಗೆ ಬಂದಾಗಿದೆ. ಈ ತಲ್ಲಣಗಳ ಕಂಪನಾಂಕವನ್ನು ಖಚಿತವಾಗಿ ದಾಖಲಿಸುವುದು ಕಷ್ಟವೇ.

ಸರ್ಕಾರಿ ಕಾಲೇಜಿನ ಅಧ್ಯಾಪಕಿ ವಿನಯಾ ಧಾರವಾಡದಲ್ಲಿ ನೆಲೆಸಿದ್ದಾರೆ. ಸಮಕಾಲೀನ ವಿದ್ಯಮಾನಗಳನ್ನು ಸ್ತ್ರೀ ನೋಟದ ಮೂಲಕ ಸೂಕ್ಷ್ಮವಾಗಿ ಚಿತ್ರಿಸುವ ಅವರು, 'ಬಾಯಾರಿಕೆ', 'ನೂರು ಗೋರಿಯ ದೀಪ', 'ಹಸಬಿ' ಎಂಬ ಕವಿತೆಯ ಸಂಗ್ರಹಗಳನ್ನು, 'ಊರ ಒಳಗಣ ಬಯಲು', 'ಉರಿ' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ.